೧೩) ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪಂಡಿತ್ ಜವಾಹರ್‌ಲಾಲ್ ನೆಹರೂ ಗದ್ದುಗೆಯನ್ನು ಸ್ಥಾಪಿಸುವುದು.

೧೪) ಬೆಂಗಳೂರಿನಲ್ಲಿ ಕಟ್ಟಲಾಗುತ್ತಿರುವ ಪ್ಲಾನೆಟೋರಿಯಮ್‌ನ್ನು 'ಪಂಡಿತ ಜವಾಹರ್‌ಲಾಲ್ ನೆಹರೂ ಪ್ಲಾನೇಟೋರಿಯಮ್' ಎಂದು ನಾಮಕರಣ ಮಾಡುವುದು.

೧೫) ವಿಧಾನ ಸೌಧದ ಮುಂಭಾಗದಲ್ಲಿ ಪಂಡಿತ್ ಜವಾಹರ್‌ಲಾಲ್ ನೆಹರೂರವರ ಪ್ರತಿಮೆಯನ್ನು ಅನಾವರಣಗೊಳಿಸುವುದು.

೧೬) ನ್ಯಾಷನಲ್ ಯೂಥ್ ಕ್ಯಾಂಪ್, ಯುವ ಚಟುವಟಿಕೆಗಳಲ್ಲಿ ತೊಡಗಿರುವ ಸಿಬ್ಬಂದಿ ತರಬೇತಿಗಾಗಿ ತರಬೇತಿ ಕೇಂದ್ರ ಸ್ಥಾಪನೆ. ನಾಲ್ಕು ವಿಭಾಗ ಕೇಂದ್ರಗಳಲ್ಲಿ ಒಳಾಂಗಣ ಪಂದ್ಯಗಳನ್ನು ಹಾಗೂ ಸಾಹಸಮಯ ಕಾರ್ಯಕ್ರಮಗಳನ್ನು, ಗ್ರಾಮೀಣ ಕ್ರೀಡೆಗಳನ್ನು ಏರ್ಪಡಿಸಲು, ನೆಹರೂ ವಿಚಾರ ಕೇಂದ್ರಗಳ ಸ್ಥಾಪನೆ, ಪಂಡಿತ್ ಜವಾಹರ ಲಾಲ್ ನೆಹರೂ ಜನ್ಮ ಶತಾಬ್ದಿ ಕ್ರಿಕೆಟ್ ಹಾಕಿ ಮತ್ತು ಫುಟ್‌ಬಾಲ್ ಪಂದ್ಯಾವಳಿಗಳನ್ನು ಏರ್ಪಡಿಸುವುದು.

೧೭) ಬೆಂಗಳೂರಿನಲ್ಲಿ ಒಂದು ಕಲಾ ಮೇಳವನ್ನು ಏರ್ಪಡಿಸುವುದು.

ಮೈಸೂರು ಜಿಲ್ಲೆಯ ಅಬ್ಕಾರಿ ಕಂಟ್ರಾಕ್ಟರುಗಳಿಂದ ಸರಕಾರಕ್ಕೆ ಬರಬೇಕಾದ ಶಿಸ್ತು ಶುಲ್ಕದ ಮೊಬಲಗು

೫೯೭. ಶ್ರೀ ಪಿ. ಎಂ. ಚಿಕ್ಕಬೋರಯ್ಯ (ಚಾಮರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆಯಲ್ಲಿರುವ ಮನ್ನಣೆ ಪಡೆದ ಅಬ್ಕಾರಿ ಕಂಟ್ರಾಕ್ಟರುಗಳ ಸಂಖ್ಯೆ ಎಷ್ಟು, (ವಿವರಣೆ ನೀಡುವುದು)

ಆ) ೧೯೫೮-೫೯ ರಲ್ಲಿ ಅವರಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾದ ಕಿಸ್ತು, ಶುಲ್ಕ ಇತ್ಯಾದಿ ಬಾಕಿ ಮೊಬಲಗೆಷ್ಟು,

ಇ) ಬಾಕಿ ವಸೂಲಿಗೆ ಕೈಗೊಂಡ ಕ್ರಮಗಳೇನು, ಹಾಗೂ ಈ ಕ್ರಮಗಳಿಂದ ವಸೂಲಾದ ಮೊಬಲಗೆಷ್ಟು,

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೮ (ಎಂಟು) ವಿವರ ಈ ಕೆಳಗಿನಂತೆ ಇರುವುದು.

೧. ಮೆ. ಶ್ರೀ ವಿಜಯಾ ಎಂಟರ್‌ಪ್ರೈಸಸ್ ನಂ. ೨೨೦೨, ಹೊಸ ಸಯ್ಯಾಜಿರಾವ್ ರಸ್ತೆ, ಮೈಸೂರು ಇವರು ಮೈಸೂರು ಮತ್ತು ಚಾಮರಾಜನಗರ ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರು.

೨. ಶ್ರೀ ಎಂ. ಸುಬ್ರಮಣಿಯನ್, ನಂ. ೧೮೧೩, ಪ್ರಶಾಂತ್‌ನಗರ, ಟಿ. ದಾಸರಹಳ್ಳಿ, ಬೆಂಗಳೂರು, ಇವರು ಕೊಳ್ಳೇಗಾಲ ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರು.

೩. ಶ್ರೀ ಟಿ. ತಿಮ್ಮೇಗೌಡ, ನರಸಿಂಹ ಮೇಸ್ತ್ರಿ ಲೇನ್, ಕಾಟನ್ ಪೇಟೆ, ಬೆಂಗಳೂರು, ಇವರು ಟಿ. ನರಸೀಪುರ ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರ್.

೪. ಮೆ. ರಂಗನಾಥ್ ಎಂಟರ್ ಪ್ರೈಸಸ್, ನಂ. ೪೨೧, ೩ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು, ಇವರು ನಂಜನಗೂಡು ಮತ್ತು ಯಳಂದೂರು ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರು,

೫. ಶ್ರೀ ಕೆ. ಶ್ರೀನಿವಾಸ್ ನಂ. ೧೦.೨೪, ಶಾಂತಿನಿವಾಸ, ಸಂತೇಪೇಟೆ, ಕೊಳ್ಳೇಗಾಲ ಇವರು ಗುಂಡ್ಲುಪೇಟೆ ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರ್.

೬. ಮಲ್ಲೇಶ ಮತ್ತು ಕಂಪನಿ ಹೊಳೇನರಸೀಪುರ, ಹಾಸನ ಜಿಲ್ಲೆ, ಇವರು ಕೆ. ಆರ್. ನಗರ ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರ್.

೭. ಶ್ರೀ ಕೆ. ಶಿವಕುಮಾರ್, ಕರಿಗೇಗೌಡರ ಮಗ, ಮಾಂಬಳ್ಳಿ, ಯಳಂದೂರು ತಾಲ್ಲೂಕು ಇವರು ಹುಣಸೂರು ಮತ್ತು ಪಿರಿಯಾ ಪಟ್ಟಣ ತಾಲ್ಲೂಕುಗಳ ಸಾರಾಯಿ ಕಂಟ್ರಾಕ್ಟರ್.

೮. ಆರ್. ಶ್ರೀನಿವಾಸ್, ನಂ. ೨೮, ವೆಸ್ಲಿರಸ್ತೆ. ಶ್ರೀನಗರ, ಮೈಸೂರು ಇವರು ಹೆಚ್. ಡಿ. ಕೋಟೆ ತಾಲ್ಲೂಕಿನ ಸಾರಾಯಿ ಕಂಟ್ರಾಕ್ಟರ್.

ಆ) ೧೯೮೮-೮೯ನೇ ಸಾಲಿನ ಬಾಕಿ ಪ್ರತಿದಿನ ಬದಲಾವಣೆಯಾಗುತ್ತಿರುತ್ತದೆ. ಈ ವರ್ಷದ ಬಾಡಿಗೆ ಬಾಕಿ ಉಳಿದ ಹಣವನ್ನು ೩೦-೬-೮೯ರ ನಂತರ ಬಾಕಿ ಎಂದು ಪರಿಗಣಿಸಿ ನಿರ್ಧರಿಸಲಾಗುವುದು.

ಇ) ಈ ವರ್ಷದ ಬಾಡಿಗೆ ಹಣವನ್ನು ವಸೂಲು ಮಾಡಲು ಎಲ್ಲಾ ವಿಧವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಕೆ. ಆರ್. ಎಸ್. ಬೃಂದಾವನ ನವೀಕರಣಕ್ಕಾಗಿ

೫೬೪. ಶ್ರೀ ಎ. ಕೃಷ್ಣಪ್ಪ (ವರ್ತೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ. ಆರ್.ಎಸ್. ಬೃಂದಾವನದ ನವೀಕರಣಕ್ಕಾಗಿ ಐದು ಕೋಟಿ ರೂಪಾಯಿ ವೆಚ್ಚವಾಗಿರುವುದು ನಿಜವೇ?

ಆ) ೧೯೮೮ರಲ್ಲಿ ಕೆ.ಆರ್.ಎಸ್. ವೀಕ್ಷಿಸಿದವರ ಸಂಖ್ಯೆ ಎಷ್ಟು, ಹಾಗೂ ಅವರಿಂದ ಬಂದ ಚಂದಾ ಹಣ ಎಷ್ಟು, (ವಾಹನಗಳ ಚಂದಾ ಪ್ರತ್ಯೇಕವಾಗಿ ನೀಡುವುದು)

ಇ) ಕೆ.ಆರ್.ಎಸ್. ನಲ್ಲಿರುವ ಎಲ್ಲಾ ಇಲಾಖೆಗಳ ಸಿಬ್ಬಂದಿ ಸಂಖ್ಯೆ ಎಷ್ಟು, ಹಾಗೂ ೧೯೮೮ರಲ್ಲಿ ಅವರ ಸಂಬಳ ಮತ್ತಿತರ ಭತ್ಯಗಳಿಗಾಗಿ ಸರ್ಕಾರದಿಂದ ವೆಚ್ಚ ಮಾಡಿದ ಹಣವೆಷ್ಟು,

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಈವರೆವಿಗೆ ಆಗಿರುವ ವೆಚ್ಚ ೮೨.೪೯ ಲಕ್ಷ ರೂ.ಗಳು.

ಆ) ವೀಕ್ಷಿಸಿದವರ ಸಂಖ್ಯೆ ೨೯,೭೦,೦೦೦

ಒಟ್ಟು ಚಂದಾ ಹಣ. ೯೧,೮೨,೫೮೮ ರೂಪಾಯಿಗಳು

ವಾಹನಗಳ ಚಂದಾ ೪೧,೯೭,೯೪೪ ರೂಪಾಯಿಗಳಂ

ಇ) ಒಟ್ಟು ಸಿಬ್ಬಂದಿ ೨೬೪

ಒಟ್ಟು ಸಿಬ್ಬಂದಿ ವೆಚ್ಚ. ೫೨,೬೫,೫೪೪ ರೂಪಾಯಿಗಳು

ಸಂಕೇಶ್ವರ ಚಿಕ್ಕೋಡಿ ಜೀವರಗಿ ಮಾರ್ಗವನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವುದರಲ್ಲಿ ವಿಳಂಬ

೩೭೨. ಶ್ರೀ ವಂಟ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಕೇಶ್ವರ-ಚಿಕ್ಕೋಡಿ-ಜೀವರಗಿ ಮಾರ್ಗವನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಿದ್ದು ನಿಜವೇ?

ಆ) ಇದಕ್ಕಾಗಿ ಕೇಂದ್ರ ಸರ್ಕಾರದಿಂದ ಮಂಜೂರಾದ ಮೊತ್ತವೆಷ್ಟು?

ಇ) ಹಣ ಬಿಡುಗಡೆ ಆಗಿದ್ದಲ್ಲಿ ಹೆದ್ದಾರಿಯ ಕಾರ್ಯವನ್ನು ಪ್ರಾರಂಭಿಸಲು ಯಾವ ಇಲಾಖೆಗೆ ವಹಿಸಿಕೊಡಲಾಗಿದೆ?

ಶ್ರೀ ಕೃಷ್ಣಾರೆಡ್ಡಿ. (ಲೋಕೋಪಯೋಗಿ ಮಂತ್ರಿಗಳು).—

ಅ) ಇಲ್ಲ,

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ,